ಕರ್ನಾಟಕ ಸರ್ಕಾರ

# ನೆರಿಗಾ ಗ್ರಾಮ ಪಂಚಾಯತಿ ಕಾರ್ಯಾಲಯ

## ಸರ್ಜಾಪುರ ಹೋಬಳಿ, ಆನೇಕಲ್‌ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

ಗ್ರಾ ಪಂ:ಸಿ.ಆರ್/ 44/2024-25 | ದಿನಾಂಕ: 13/09/2024

**-:ನಿರಾಕ್ಷೇಪಣಾ ಪತ್ರ:-**

ಬೆಂಗಳೂರು ನಗರ ಜಿಲ್ಲೆ, ಅನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿ, ನೆರಿಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ **ಗೋಣೆಗಟ್ಟಪುರ** ಗ್ರಾಮದ **ಸರ್ವೆ ನಂ 64/5 ರಲ್ಲಿ 0.26.08 ಗುಂಟೆ, ಸರ್ವೆ ನಂ 64/4 ರಲ್ಲಿ 26.08 ಗುಂಟೆ, ಸರ್ವೆ ನಂ 64/3 ರಲ್ಲಿ 0.27 ಗುಂಟೆ ಒಟ್ಟು 02.00** ಎಕರೆ ಪ್ರದೇಶವು ಮಾನ್ಯ ಜಿಲಾಧಿಕಾರಿಗಳ ಭೂ ಪರಿವರ್ತನಾ ಆದೇಶದಂತೆ ಅರ್ಜಿದಾರರ ಹೆಸರಿಗೆ ಭೂ-ಪರಿವರ್ತನೆ ಆಗಿರುತ್ತದೆ. ಸದರಿ ಜಮೀನಿನಲ್ಲಿ **ಅಮರೇಶ್ ಬಿನ್ ಲೇಟ್ ಚಿಕ್ಕಣ್ಣಯ್ಯ, ಮಂಜುಳ ಕೋಂ ಲೇಟ್ ರಮೇಶ್, ಸಿ.ನಾಗರಾಜು ಬಿನ್ ಲೇಟ್ ಚಿಕ್ಕಣ್ಣಯ್ಯ** ರವರು ವಸತಿ ಸಮುಚ್ಚಯ ನಿರ್ಮಾಣ ಮಾಡಲು ಉದ್ದೇಶಿಸಿರುತ್ತಾರೆ. ಸದರಿಯವರು ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ನೀರು ಸರಬರಾಜು ಒಳಚರಂಡಿ ವ್ಯವಸ್ತೆಯನ್ನು ಅಭಿವೃದ್ದಿ ಪಡಿಸುವುದಕ್ಕೆ ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಅಕ್ಷೇಪಣೆ ಇರುವುದಿಲ್ಲ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯಿತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಭಂದಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಡೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದ್ದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸವಾದಲ್ಲಿ ಹಾಗೂ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದ್ದು. ಸದರಿ ಜಮೀನಿಗೆ ರಸ್ತೆ ಸಂಪರ್ಕವು ಇರುತ್ತದೆ.

ಸದರಿ ವಸತಿ ಸಮುಚ್ಚಯಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಅಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂದಪಟ್ಟವರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

Kathan

**ಪಂಚಾಯತಿ ಅಭಿವೃದ್ಧಿ ಅಧಿಕಾರಿ**<br>**ನೆರಿಗಾ ಗ್ರಾಮ ಪಂಚಾಯಿತಿ**<br>**ಆನೇಕಲ್ ತಾಲ್ಲೂಕು**

**ರವರಿಗೆ**<br>**ಅಮರೇಶ್ ಬಿನ್ ಲೇಟ್ ಚಿಕ್ಕಣ್ಣಯ್ಯ,**<br>**ಮಂಜುಳ ಕೋಂ ಲೇಟ್ ರಮೇಶ್,**<br>**ಸಿ.ನಾಗರಾಜು ಬಿನ್ ಲೇಟ್ ಚಿಕ್ಕಣ್ಣಯ್ಯ**<br>**ಗೋಣೆಗಟ್ಟಪುರ ಗ್ರಾಮ**<br>**ಬೆಂಗಳೂರು**